	ಕಾಮಗಾರಿಯ ಹೆಸರು	ಪ್ರಾರಂಭ ಮಾಡಿದ ವರ್ಷ	ಜನವರಿ 1992 ರವರೆಗೆ ಆಗಿರುವ ವೆಚ್ಚ
1.	ನಾರಾಯಣಪುರ ಅಣೆಕಟ್ಟು ಮತ್ತು ಸಂಬಂಧಿತ ಕಾಮಗಾರಿಗಳು	1968-69	38.50 ಕೋಟಿ ರೂ.ಗಳು
2.	ಆಲಮಟ್ಟಿ ಅಣೆಕಟ್ಟು ಮತ್ತು ಸಂಬಂಧಿತ ಕಾಮಗಾರಿಗಳು	1972	37.24 ಕೋಟಿ ರೂ.ಗಳು
3.	ನಾರಾಯಣಪುರ ಕಾಲುವೆ ಮತ್ತು ಅದರ ಉಪ ಕಾಲುವೆಗಳು	1972	388.23 ಕೋಟಿ ರೂ.ಗಳು
4.	ಆಲಮಟ್ಟಿ ಎಡದಂಡೆ ಕಾಲುವೆ	ಇನ್ನೂ ಪ್ರಾರಂಭಿಸಿಲ್ಲ	-
5.	ಆಲಮಟ್ಟಿ ಜಲಾಶಯದಿಂದ ಮುಳವಾಡ ಏತ ನೀರಾವರಿ ಯೋಜನೆಯ ನೀರಾವರಿ ಯೋಜನೆಯ ಹೆಡ್ ವರ್ಕ್ಸ್	1992	- (ಇತ್ತೀಚೆಗೆ ಈ ಕಾಮಗಾರಿಗಾಗಿ 150 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ)

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳ ಪ್ರಥಮ ಯೋಜನಾ ವರದಿಯನ್ನು 1965ರಲ್ಲಿ ತಯಾರಿಸಲಾಗಿದ್ದು ಅದರ ಅಂದಾಜು ವೆಚ್ಚ 58.20 ಕೋಟಿ ರೂ. ಗಳಾಗಿರುತ್ತದೆ. ಈ ಮೂಲ ಯೋಜನೆಯ ಪ್ರಕಾರ 103 ಟಿಎಂಸಿ ನೀರನ್ನು ಬಳಸಿ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ಸುಮಾರು 6 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿತ್ತು.

ಇ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು 1-4-1992 ರಲ್ಲಿರುವಂತೆ ಬೇಕಾದ ಹಣ ಸುಮಾರು 484 ಕೋಟಿ ರೂಪಾಯಿಗಳು (ಎಸ್‌ಕಲೇಶನ್ ಹೊರತುಪಡಿಸಿ) ಬೆಲೆ ಹೆಚ್ಚಳವನ್ನು (ಎಸ್‌ಕಲೇಶನ್) ಪರಿಗಣಿಸಿದಲ್ಲಿ. ಬಾಕಿ ಕಾಮಗಾರಿಗಳ ಅಂದಾಜು ವೆಚ್ಚ ಸುಮಾರು 919 ಕೋಟಿ ರೂ.ಗಳಾಗುತ್ತದೆ. ಮೊದಲ ಘಟ್ಟದ ಈ ಯೋಜನೆಯನ್ನು 1996ರ ಮೇಳಿಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಆನ್ವೇಷಣಾ ಹಂತದಲ್ಲಿರುವ ಎರಡನೇ ಘಟ್ಟದ ಯೋಜನೆಯನ್ನು 2000 ಇಸವಿ ಒಳಗಡೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ನೆಲಮಂಗಲ-ತುಮಕೂರು ರಸ್ತೆಯನ್ನು ನಾಲ್ಕು ಪಥದ ರಸ್ತೆಯಾಗಿ ಪರಿವರ್ತನೆ

1136 (1918) ಶ್ರೀ ಷಫಿ ಅಹಮದ್ (ತುಮಕೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನೆಲಮಂಗಲ - ತುಮಕೂರು ರಸ್ತೆಯನ್ನು 4 ಪಥ ರಸ್ತೆ ಮಾಡುವ ಕೆಲಸವನ್ನು ಪ್ರಾರಂಭಿಸಲು ಸರ್ಕಾರ ಪ್ರಸ್ತಾಪಿಸಿದೆಯೇ?

2) ಹಾಗಿದ್ದಲ್ಲಿ, ಭೂಸ್ವಾಧೀನ ನಡವಳಿಗಳು ಯಾವ ಹಂತದಲ್ಲಿದೆ?

3) ಈ ಬಗ್ಗೆ ಒಟ್ಟು ಅಂದಾಜು ಮೊತ್ತ ಎಷ್ಟು?

ಶ್ರೀ ಜಿ.ಹೆಚ್. ಅಶ್ವತ್ಥ್‌ರೆಡ್ಡಿ (ಲೋಕೋಪಯೋಗಿ ಸಚಿವರು) :

1) ಹೌದು.

2) ಅಲೈನ್‌ಮೆಂಟ್ ಪ್ರಸ್ತಾವನೆಗಳಿಗೆ ಭಾರತ ಸರ್ಕಾರದ ಭೂಸಾರಿಗೆ ಮಂತ್ರಾಲಯದ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ.

3) ಪೂರ್ತಿ ಕಾಮಗಾರಿಗೆ ಸುಮಾರು 36 ಕೋಟಿ ರೂಪಾಯಿಗಳು.

ರಾಜಾಜಿನಗರ ವಸತಿ ಗೃಹಗಳಲ್ಲಿ ವಿದ್ಯುತ್ ದೀಪಗಳ ದುರಸ್ತಿ

1138 (1960) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರದ 6ನೇ ಬಡಾವಣೆಯ ಸರ್ಕಾರಿ ವಸತಿ ಗೃಹಗಳಲ್ಲಿ ಮೆಟ್ಟಿಲುಗಳಲ್ಲಿ ಅಳವಡಿಸಿರುವ ವಿದ್ಯುತ್ ದೀಪಗಳು ಕೆಟ್ಟಿದ್ದು, ಇದನ್ನು ದುರಸ್ತಿಗೊಳಿಸದಿರಲು ಕಾರಣವೇನು;

ಆ) ಈಗಾಗಲೇ ಸದರಿ ಮೆಟ್ಟಿಲುಗಳಲ್ಲಿ ಇರುವ ವಿದ್ಯುತ್ ದೀಪಗಳ ವಿದ್ಯುತ್ ಖರ್ಚನ್ನು ಸರ್ಕಾರವೇ ವಹಿಸಿಕೊಂಡು ಮೆಟ್ಟಿಲುಗಳಲ್ಲಿನ ದೀಪ ಉರಿಯಲು ಕ್ರಮ ಕೈಗೊಳ್ಳುವುದೇ;

ಇ) ಈಗಾಗಲೇ ವಿದ್ಯುತ್ ದೀಪಗಳನ್ನು ವ್ಯವಸ್ಥಿತ ರೀತಿಯಲ್ಲಿ ರಾತ್ರಿಯ ವೇಳೆಯಲ್ಲಿ ಉಪಯೋಗಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ಈ ದೀಪಗಳು ಯಾವುದೇ ಮನೆಗೆ ವೈಯಕ್ತಿಕವಾಗಿ ಇರದೇ, ಸಾರ್ವಜನಿಕವಾಗಿದ್ದು, ಇವುಗಳಿಗೆ ಯಾವುದೇ ತರಹದ ಸಂರಕ್ಷಣೆ ಇಲ್ಲದಿದ್ದು, ದುರಸ್ತಿ ಮಾಡಿಸಿದ ಕೆಲವೇ ದಿನಗಳಲ್ಲಿ ಹಾಳಾಗಿರುವುದು.

ಆ) ಸಂರಕ್ಷಣೆ ಹಾಗೂ ವಿದ್ಯುತ್ ಬಳಕೆಯ ದರಕ್ಕೆ ಅನುದಾನದ ಲಭ್ಯತೆ ಮೇಲೆ ಸರ್ಕಾರ ವಹಿಸಿಕೊಳ್ಳುವ ವಿಷಯದಲ್ಲಿ ಪರಿಶೀಲಿಸಲಾಗುವುದು.

ಇ) ವಿದ್ಯುತ್ ದೀಪಗಳು ರಾತ್ರಿಯ ವೇಳೆಯಲ್ಲಿಯೂ ಉರಿಯುವಂತೆ ಮಾಡಲು ವಿದ್ಯುಚ್ಛಕ್ತಿ ಮಂಡಲಿಯವರೊಂದಿಗೆ ಚರ್ಚಿಸಿ, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗುವುದು.